**ಓ ಎಸ್ ನಂ. 102/2015**

**ಪಿ. ಡಬ್ಲ್ಯೂ: 1**

**ದಿಃ 09.03.2020 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಸಿ.ಬಿ. ವಕೀಲರಿಂದಃ**

3. ನಾನು ದಿಃ 08.02.2006 ರ ಖರೀದಿ ಮಾರಾಟ ಒಪ್ಪಂದ ಕರಾರು ಪತ್ರವನ್ನು ಸರಿಯಾದ ರಾಜಸ್ವ ಶುಲ್ಕ ಮತ್ತು ದಂಡವನ್ನು ಪಾವತಿಸಿದ ನಂತರ ಅದನ್ನು ನಿಪಿ-01 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-01 ರ ಮೊದಲ ಮತ್ತು 2 ನೇ ಪುಟದಲ್ಲಿರುವ ಪ್ರತಿವಾದಿಯರ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಸದರಿ ಸಹಿಗಳನ್ನು ನಿಪಿ-01(ಎ), ನಿಪಿ-01(ಬಿ), ನಿಪಿ-01(ಸಿ) ಮತ್ತು ನಿಪಿ-01(ಡಿ) ಎಂದು ಗುರುತಿಲಾಯಿತು. ನಿಪಿ-01 ಕ್ಕೆ ಸಾಕ್ಷಿದಾರರಾಗಿ ಮಲ್ಲಿಕಾರ್ಜುನ ಮತ್ತು ಗಂಗಾಧರ ಎಂಬ ಸಾಕ್ಷಿದಾರರು ಕೂಡ ಸಹಿ ಮಾಡಿರುತ್ತಾರೆ. ನಾನು ದಾವಾ ಸ್ವತ್ತಿನ 3 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-02 ರಿಂದ 04 ಎಂದು ಗುರುತಿಸಲಾಯಿತು. ದಾವಾ ಹಾಕುವ ಪೂರ್ವದಲ್ಲಿ ಪ್ರತಿವಾದಿಯರಿಗೆ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-05 ಎಂದು ಗುರುತಿಸಲಾಯಿತು. ದಿಃ 04.02.2014 ರ 2 ಅಂಚೆ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-06 ಮತ್ತು ನಿಪಿ-07 ಎಂದು ಗುರುತಿಸಲಾಯಿತು. 2 ಅಂಚೆ ಸ್ವೀಕೃತಿ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-08 ಮತ್ತು ನಿಪಿ-09 ಎಂದು ಗುರುತಿಸಲಾಯಿತು. ನಾನು ದಾವೆಯಲ್ಲಿ ಕೇಳಿಕೊಂಡಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಪ್ರತಿವಾದಿಯರನ್ನು ಕೂಗಿಸಲಾಗಿ, ಗೈರು ಹಾಜರು ಇದ್ದು, ಕಾಲಾವಕಾಶ ನೀಡಿ, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ .